These young men were working there. Naturally when the staff is less there would be some difficulty. ಮಾನ್ಯ ಸದಸ್ಯರು ಆಸ್ಪತ್ರೆಗಳಲ್ಲಿ ಹೋಗಿ ನೋಡಿದರೆ ಎಷ್ಟು ಜನ ಕ್ಯೂನಲ್ಲಿ ಬಹಳ ಹೊತ್ತಿನಿಂದ ಕಾದಿರುತ್ತಾರೆನ್ನುವುದು ಅವರಿಗೂ ಚೆನ್ನಾಗಿ ಅರ್ಥವಾಗುತ್ತದೆ.

There are bound to be some inconveniences in this country-we are putting up with a number of such difficulties. But I can assure the House that I will not allow the work in the hospitals to get paralised.

ಶ್ರೀ ಹೆಚ್. ಎಸ್. ಸಿದ್ದಪ್ಪ.— ಸ್ವಾಮೀ, ಮಾನ್ಯ ಮಂತ್ರಿಗಳು ಇಲ್ಲಿ ಹೌಸ್ ಸರ್ಜನ್‌ಗಳ ಬಗ್ಗೆ ಹೇಳುತ್ತಾ ಇದು ಒಂದು ರೀತಿಯಾಗಿ ಕೊಡುವ ಭಕ್ಷೀಸ್ ಬಾಕಿ ಡಾಕ್ಟರುಗಳಿಗೆ ಕೊಡುವ ಹಾಗೆ ಇದು ಸ್ಟ್ಯಾಚುಟರಿ ಸಂಬಳವಲ್ಲ ಎಂದು ಹೇಳಿದರು, ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೇಳಿದಂತೆ ಇಲ್ಲ ಇದನ್ನು ಸರಿಯಾಗಿ ಕೊಡುವಂತೆ ಮಾಡಿ ಇಲ್ಲವೇ ಪೂರ್ಣವಾಗಿ ತಪ್ಪಿಸಿಬಿಡಿ. It is not a statutory salary.

ಶ್ರೀ ಎಚ್. ಸಿದ್ದವೀರಪ್ಪ.— ಇವರಿಗೆ ಕೊಡುತ್ತಿರುವುದು ಬಕ್ಷೀಸ್ ಅಲ್ಲ. ಇದು ಅವರು ಮಾಡುವ ಕೆಲಸಕ್ಕೆ ಸ್ಟೈಪೆಂಡ್ ಎಂದು ಕೊಡಲಾಗುತ್ತಿದೆ.

MADAM SPEAKER.— It is something like a scholarship.

Application of Rule 312 about admission of Notices

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್)— ನಾನು ತಮ್ಮ ಕಡೆಗೆ ರೂಲು ೩೧೨ರ ಕೆಳಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು.— ತಾವು ದಯವಿಟ್ಟು ಕಳಿತುಕೊಳ್ಳಬೇಕು. ಈಗ ಅದರ ಬಗ್ಗೆ ಇಲ್ಲಿ ಹೇಳುವುದು ಬೇಡ.

ಶ್ರೀ ವಿ. ಎನ್. ಪಾಟೀಲ್.— ನಾನು ಒಬ್ಬರು ಪೋಲೀಸು ಹೆಡ್ ಕಾನಸ್ಟೇಬಲ್ ಬಗ್ಗೆ ನಡೆದ ಅವ್ಯವಸ್ಥೆಗಳ ಬಗ್ಗೆ ನೋಟೀಸು ಕಳುಹಿಸಿದೆ. ಇದರ ಮಿನಿಸ್ಟರು ಇಲ್ಲಿರುವುದರಿಂದ ತಾವು ಅವರ ಕಡೆಯಿಂದ ಇಲ್ಲಿ ಹೇಳಿಕೆ ಕೊಡಿಸ ಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು.— ನಾನು ನೋಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.— ನಾನು ಎರಡು ಪ್ರಶ್ನೆಗಳನ್ನು ಕಳಿಸಿದ್ದೆ. ಇದರಲ್ಲಿ ಒಂದು ಪ್ರಶ್ನೆಗೆ ಮಾತ್ರ ಇಲ್ಲಿ ಉತ್ತರ ಬಂದಿದೆ. ಬಾಕಿ ಉಳಿದಿರುವ ಇನ್ನೊಂದು ಪ್ರಶ್ನೆಗೂ ತಾವು ಉತ್ತರವನ್ನು ತರಿಸಿಕೊಡಬೇಕು ಎಂದು ಇಲ್ಲಿ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು.— ನಾನು ತಮಗಾಗಿಯೇ ಸರಕಾರದವರಲ್ಲಿ ಸ್ಪೆಷಲ್ ಆಗಿ ಮನವಿ ಮಾಡುತ್ತಿದ್ದೇನೆ, ಅವರ ಕಡೆಯಿಂದ ನೋಡಿ ತರಿಸಿಕೊಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್.— ನಾನು ತಮ್ಮಲ್ಲಿ ಒಂದು ಮನವಿ ಮಾಡ ಬೇಕಾಗಿದೆ.

ಅಧ್ಯಕ್ಷರು.— ಈಗ ಇದರ ಬಗ್ಗೆ ಇಲ್ಲಿ ತಾವು ಏನನ್ನೂ ಪ್ರಸ್ತಾಪ ಮಾಡ ಬಾರದು.

ಶ್ರೀ ವಿ. ಎನ್. ಪಾಟೀಲ್.— ನಾನು ತಮ್ಮಲ್ಲಿ ಸ್ಪೆಷಲ್ ಆಗಿ ಪ್ರಾರ್ಥನೆ ಮಾಡುತ್ತಿದ್ದೇನೆ. ನಾನು ಹೇಳುವುದನ್ನು ತಾವು ತಪ್ಪು ತಿಳಿದುಕೊಳ್ಳಬಾರದು.

Sri H. M. CHANNABASAPPA (Minister for Public Works).— I rise to a Point of Order. It is not open to any hon. member of this House to give a direction to the Chair to sit down.

Sri C. M. ARUMUGHAM.— The hon. Minister while raising a Point of Order has given the Ruling himself.

MADAM SPEAKER.— He did not mean it !

ಶ್ರೀ ವಿ. ಎನ್. ಪಾಟೀಲ್.— ನಾನು ರೂಲು ೩೧೨ರ ಪ್ರಕಾರ ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.— ನಾನು ರೂಲು ೩೧೨ರ ಬಗ್ಗೆ ರೂಲಿಂಗು ಕೊಟ್ಟಿದ್ದೇನೆ. ರೂಲು ೩೧೨ರ ಪ್ರಕಾರ ನೋಟೀಸು ಬಂದಾಗ ಅದನ್ನು ಪರಿಶೀಲಿಸಿದ್ದೇನೆ. ಆದರೆ ಅದನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತಿಸಿ ಸರಕಾರದ ಹೇಳಿಕೆ ತರಿಸಿಕೊಡಲಾಗುತ್ತಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ.— ಮಾನ್ಯ ಅಧ್ಯಕ್ಷರೇ, ರೂಲು ೩೧೨ರ ಬಗ್ಗೆ ರೂಲಿಂಗ ಕೊಟ್ಟಿದ್ದೇನೆಂದು ಹೇಳಿದಿರಿ. ಇದರ ಅರ್ಥ ಇನ್ನು ಮುಂದೆ ಈ ಸದನದ ಸದಸ್ಯರು ಯಾರೂ ರೂಲು ೩೧೨ರ ಕೆಳಗೆ ಯಾವ ತರಹದ ನೋಟೀಸನ್ನೂ ಕಳುಹಿಸಬಾರದು ಎಂದು ಇದರ ಅರ್ಥವೇ ಹೇಗೆ ಎನ್ನುವುದು ತಿಳಿಯಲಿಲ್ಲ.

ಅಧ್ಯಕ್ಷರು.— ರೂಲು ೩೧೨ರ ಕೆಳಗೆ ನೋಟೀಸು ಬಂದಾಗ ಅದನ್ನು ತರಿಸಿ ಪರಿಶೀಲನೆ ಮಾಡಿದ್ದೇನೆ. ಅದು ಅಜೆಂಡಾದಲ್ಲಿ ಬರುವಾಗ ಕೊನೆಯಲ್ಲಿ ತರಬೇಕಾಗುತ್ತದೆ. ಇದರ ಬಗ್ಗೆ ರೂಲಿಂಗು ಆಗಲೇ ಕೊಡಲಾಗಿದೆ. ಮಾನ್ಯ ಸದಸ್ಯರು ರೂಲಿಂಗನ್ನು ತರಿಸಿ ಓದಿ ನೋಡಬಹುದು.